# ಚಂದನವನ 2019

# ಐರಾವತದ ಮೇಲೆ ಬೋರಿಂಗ್ ಸವಾರಿ

**ಕನ್ನಡ ಚಿತ್ರರಂಗದ ಪಾಲಿಗೆ, ಸಿನಿಪ್ರೇಮಿಯ ಪಾಲಿಗೆ 2019 ಹೇಗಿತ್ತು? ಕಳೆದ ವರ್ಷ ಮೂಡಿಸಿದ್ದ ನಿರೀಕ್ಷೆಗಳು ಎಷ್ಟರಮಟ್ಟಿಗೆ ಫಲಕೊಟ್ಟವು? ಚಿತ್ರರಂಗದ ಯಾವತ್ತಿನ ಸಮಸ್ಯೆಗಳು ಈ ವರ್ಷ ಕಡಿಮೆಯಾಗಿವೆಯಾ? ಹೆಚ್ಚಿವೆಯಾ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುವ ನಿಟ್ಟಿನಲ್ಲಿ 2020ರ ತಿಟ್ಟತ್ತಿ ತಿರುಗಿ ನೋಡಿದಾಗ ಕಂಡಿದ್ದಿಷ್ಟು...**

■ **ಪದ್ಮನಾಭ ಭಟ್**



'ಸ್ಲೀಪ್ ಲೈಕ್ ಎ ಬೇಬಿ' ಕೆಎಸ್‌ಆರ್‌ಟಿಸಿಯ 'ಐರಾವತ' ಬಸ್‌ಗಳಲ್ಲಿ, ಪುಟ್ಟ ಮಗುವೊಂದು ಆರಾಮಕುರ್ಚಿಯಲ್ಲಿ ಮಲಗಿ ನೆಮ್ಮದಿಯಿಂದ ನಿದ್ರಿಸುತ್ತಿರುವ ಚಿತ್ರದ ಜೊತೆಗೇ ಇರುವ ಸ್ಲೋಗನ್ ಇದು. ಈ ಜಾಹೀರಾತು 2019ರ ಕನ್ನಡ ಚಿತ್ರರಂಗದ ಚಲನೆಗೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಮಗು ನೆಮ್ಮದಿಯಿಂದ ತೊಟ್ಟಿಲಲ್ಲಿ ನಿದ್ರಿಸಿದಷ್ಟೇ ನೆಮ್ಮದಿಯಿಂದ, ಸುಖಕರವಾಗಿ ನೀವು 'ಐರಾವತ', 'ರಾಜಹಂಸ' ಬಸ್ಸುಗಳಲ್ಲಿ ನಿದ್ರಿಸಿ ಸುಗಮ ಪ್ರಯಾಣ ಮಾಡಬಲ್ಲಿರಿ ಎನ್ನುವುದು ಈ ಜಾಹೀರಾತಿನ ಅರ್ಥ.

ಆದರೆ ಈ ಅರ್ಥಕ್ಕೂ ಬಸ್ಸಿನೊಳಗಿನ ವಾಸ್ತವಕ್ಕೂ ಫೇಸ್‌ಬುಕ್ ಪ್ರೊಫೈಲ್ ಫೋಟೊ ಮತ್ತು ಆಧಾರ್ ಕಾರ್ಡಿನಲ್ಲಿರುವ ಫೋಟೊಗಳ ನಡುವೆ ಇರುವಷ್ಟೇ ಅಗಾಧ ವ್ಯತ್ಯಾಸವಿದೆ! ಹರಿದ ಸೀಟು, ತಿಗಣೆ ಕಾಟ, ಕೆಟ್ಟ ರಸ್ತೆಯ ಫಲವಾಗಿ ಎಗರೆಗರಿ ಬೀಳುವ ಜಂಪಿಂಗ್ ಪ್ರಾಕ್ಟೀಸ್ ನಡುವೆ ನಿದ್ರೆಯ ಮಾತು ಒತ್ತಟ್ಟಿಗಿರಲಿ, ಸುರಕ್ಷಿತವಾಗಿ ಗಮ್ಯ ತಲುಪಿದರೆ ಸಾಕು ಎಂದು ಇಷ್ಟದೇವರ ಬೇಡಿಕೊಳ್ಳುವಂತಾಗುತ್ತದೆ. ಆದರೆ ಗಮ್ಯ ತಲುಪಿ ಬಸ್ ಇಳಿದಾಗ ಮತ್ತದೇ 'ಸ್ಲೀಪ್ ಲೈಕ್ ಎ ಬೇಬಿ' ಜಾಹೀರಾತು ನಮ್ಮನ್ನು ಸೆಳೆಯುತ್ತದೆ. ಆ ಮಗು ಇನ್ನೂ ನೆಮ್ಮದಿಯಿಂದ ನಿದ್ರಿಸುತ್ತಲೇ ಇರುವುದನ್ನು ನೋಡಿ, 'ಆಹಾ! ಎಷ್ಟು ಮುದ್ದು. ಎಲ್ಲ ಸರಿಯಾಗಿಯೇ ಇದೆ' ಎಂಬ ಭಾವ ಹುಟ್ಟಿಸುತ್ತದೆ.

ಸರಿ. ಜಾಹೀರಾತಿಗೂ ಚಿತ್ರರಂಗಕ್ಕೂ ಹೇಗೆ ಹೋಲಿಸುವುದು? ಅದನ್ನು ನೇರವಾಗಿ ಹೇಳುವುದಕ್ಕಿಂತ 2019ರ ಚಿತ್ರರಂಗದ ಪ್ರಯಾಣದತ್ತ ಒಂದು 'ಕಿಡಿನೋಟ' ಬೀರೋಣ. ಸಾಮ್ಯತೆ ತಂತಾನೆಯೇ ಹೊಳೆದೀತು.

'ಟಗರು', 'ವಿಲನ್', 'ಕೆಜಿಎಫ್' ಚಿತ್ರಗಳನ್ನು ಬಿಟ್ಟರೆ ಸ್ಟಾರ್ ನಟರ ಚಿತ್ರಗಳ್ಯಾವವೂ 2018ರಲ್ಲಿ ಬಿಡುಗಡೆಯಾಗಿರಲಿಲ್ಲ. ಆ ವರ್ಷ ಸಿನಿಮಾಗಳ ಕಾರಣಕ್ಕಿಂತ ವಿವಾದಗಳ ಕಾರಣಗಳಿಂದಲೇ ಚಿತ್ರರಂಗ ಹೆಚ್ಚು ಸುದ್ದಿಯಾಯಿತು. ವರ್ಷದುದ್ದಕ್ಕೂ ಗಾಂಧಿನಗರದ ಅಂಗಳದಲ್ಲಿ ಆಗೀಗ ದೂಳು ಏಳುತ್ತಲೇ ಇತ್ತು. ಆ ವರ್ಷ ನಾಪತ್ತೆಯಾಗಿದ್ದ ಸ್ಟಾರ್‌ಗಳೆಲ್ಲ 2019ರಲ್ಲಿ ತೆರೆಯ ಮೇಲೆ ಸಾಲು ಸಾಲಾಗಿ ಮರಳಲಿದ್ದಾರೆ ಎಂಬ ಸುದ್ದಿಯೇ ಈ ವರ್ಷದ ಕುರಿತು ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟಿಸಿತ್ತು. ಹೊಸ್ತಿಲ ದಾಟಿ ಬಂದ 2019ರಲ್ಲಿ ಆ ನಿರೀಕ್ಷೆಗಳೆಲ್ಲ ಫಲ ಕೊಟ್ಟಿವೆಯೇ?

ಈ ವರ್ಷ ಹಲವು ಸ್ಟಾರ್ ನಟರ ಸಿನಿಮಾಗಳು ಬಿಡುಗಡೆಯಾಗಿದ್ದಂತೂ ಹೌದು. ಸುದೀಪ್, ಪುನೀತ್, ಶ್ರೀಮುರಳಿ, ಉಪೇಂದ್ರ, ಶಿವರಾಜ್‌ಕುಮಾರ್, ಗಣೇಶ್ ಹೀಗೆ ಬಹುತೇಕ ಸ್ಟಾರ್‌ನಟರ ಸಿನಿಮಾಗಳು ಬಿಡುಗಡೆಯಾಗಿವೆ. ಅದರಲ್ಲಿಯೂ ವರ್ಷಕ್ಕೊಂದು ಸಿನಿಮಾ ಮಾಡಲೂ ಹಿಂದೆಮುಂದೆ ನೋಡುತ್ತಿದ್ದ ದರ್ಶನ್ ಅಭಿನಯದ ಮೂರು ಸಿನಿಮಾಗಳು ಬಿಡುಗಡೆಯಾಗಿವೆ. ಆದರೆ ಅವುಗಳಲ್ಲಿ ಬಿಗ್ ಹಿಟ್ ಅನಿಸಿಕೊಂಡಿರುವ ಸಿನಿಮಾ ಯಾವುದು ಎಂದು ನೋಡಿದರೆ ಮತ್ತೊಮ್ಮೆ ಕಣ್ಣುಜ್ಜಿಕೊಂಡು ಹುಡುಕಬೇಕಾಗುತ್ತದೆ. ತಮ್ಮ ನೆಚ್ಚಿನ ತಾರಾನಟರ ಸಿನಿಮಾಗಳನ್ನು ದೊಡ್ಡ ನಿರೀಕ್ಷೆಯಿಂದ ನೋಡಹೋದ ಪ್ರೇಕ್ಷಕರಿಗೆ, ಮಗು ಮಲಗಿರುವ ಜಾಹೀರಾತು ನೋಡಿ 'ಐರಾವತ'ದಲ್ಲಿ ಪ್ರಯಾಣ ಮಾಡಿದಷ್ಟೇ ನಿರಾಸೆಯಾಗಿದೆ!

## ಸೌಂಡು ಜೋರು; ಬರೀ ಬೋರು

ಸ್ಟಾರ್ ನಟರ ಸಿನಿಮಾಗಳೆಲ್ಲ ಜೋರು ಸೌಂಡಿನೊಂದಿಗೆ ತೆರೆಗೆ ಬಂದವು. ಈ ಪರೇಡ್ ಶುರುವಾಗಿದ್ದು ಫೆಬ್ರುವರಿಯಲ್ಲಿ ಪುನೀತ್ ರಾಜ್‌ಕುಮಾರ್ ಅಭಿನಯದ 'ನಟಸಾರ್ವಭೌಮ' ಸಿನಿಮಾದ ಮೂಲಕ. ಕನ್ನಡಕ ತೊಟ್ಟ ಪುನೀತ್ ವೇಷ ಮತ್ತು ಕೇರಳದ ಸುಂದರಿ ಅನುಪಮಾ ಮಂದಹಾಸದ ಬಲದಿಂದ ಒಂದಿಷ್ಟು ದಿನ ಚಿತ್ರಮಂದಿರಗಳಲ್ಲಿ ನಿಂತು ನಿರ್ಮಾಪಕರನ್ನು ದಡ ಮುಟ್ಟಿಸಿತೇ ವಿನಾ, ಭರ್ಜರಿ ಗಳಿಕೆಯನ್ನೇನೂ ಮಾಡಲಿಲ್ಲ.

ಮಾರ್ಚ್‌ನಲ್ಲಿ ತೆರೆಕಂಡ ದರ್ಶನ್ ಅಭಿನಯದ 'ಯಜಮಾನ' ಸಿನಿಮಾಕ್ಕೂ ಪ್ರೇಕ್ಷಕರ